# ತೈತ್ತಿರೀಯೋಪನಿಷತ್ತಿನ ಸಾರ

ಆರ್. ಕೆ. ಶ್ರೀಕಂಠಕುಮಾರಸ್ವಾಮಿ

ಉಪನಿಷತ್ತುಗಳು ನೂರೆಂಟು ಎಂದು ಪ್ರಸಿದ್ಧವಾಗಿದ್ದರೂ, ಅವುಗಳಲ್ಲಿ ಹತ್ತು ಉಪನಿಷತ್ತುಗಳು ಮಾತ್ರ ಮುಖ್ಯವೆಂದು ಪರಿಗಣಿಸಲ್ಪಟ್ಟಿವೆ. ಮೂರು ಜನ ವೇದಾಂತಾಚಾರ್ಯರೂ ಈ ಹತ್ತು ಉಪನಿಷತ್ತುಗಳಿಗೇ ಭಾಷ್ಯ ರಚಿಸಿದ್ದಾರೆ.

ಅವುಗಳಲ್ಲಿ ತೈತ್ತಿರೀಯೋಪನಿಷತ್ತೂ ಒಂದು. ಇದು ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಗೆ ಸೇರಿದ್ದಾದ್ದರಿಂದ ಇದಕ್ಕೆ ತೈತ್ತಿರೀಯೋಪನಿಷತ್ತೆಂದು ಹೆಸರು ಬಂದಿದೆ. ಇದು ಒಟ್ಟು ೪ ಪ್ರಶ್ನೆ (ಭಾಗ)ಗಳನ್ನೊಳಗೊಂಡಿದೆ. ಮೊದಲನೇ ಮೂರು ಪ್ರಶ್ನೆಗಳಿಗೆ **ಶೀಕ್ಷಾವಲ್ಲೀ, ಆನಂದವಲ್ಲೀ, ಭೃಗುವಲ್ಲೀ** ಎಂದು ಹೆಸರು ಕೊಟ್ಟಿದ್ದಾರೆ. ನಾಲ್ಕನೆಯದಕ್ಕೆ **ಮಹಾನಾರಾಯಣ** ಎಂಬ ಹೆಸರಿದೆ. ಇದು ಮೊದಲಿನ ಮೂರಕ್ಕಿಂತಲೂ ಬಹಳ ವಿಸ್ತಾರವಾಗಿದೆ. ಉಪನಿಷತ್ತುಗಳ ಮುಖ್ಯ ಉದ್ದೇಶದಂತೆ ಮೊದಲನೆಯ ಮೂರು ಉಪನಿಷತ್ತುಗಳು ಬ್ರಹ್ಮಪ್ರತಿಪಾದಕವಾಗಿವೆ. ನಾಲ್ಕನೆಯದರಲ್ಲಿ ಬ್ರಹ್ಮಪರವಾದ ಮಂತ್ರಗಳು ಅನೇಕವಿದ್ದರೂ, ಅಷ್ಟೇ ವಿಪುಲವಾಗಿ ಕರ್ಮಭಾಗದ ಮಂತ್ರಗಳೂ ಸೇರಿಕೊಂಡಿವೆ. ಅದಕ್ಕೇ ಈ ನಾಲ್ಕನೆಯ ಭಾಗಕ್ಕೆ ಯಾವ ಆಚಾರ್ಯರೂ ಭಾಷ್ಯ ಬರೆದಿಲ್ಲ. ವಿಜಯನಗರದ ಸಾಮ್ರಾಜ್ಯ ಸ್ಥಾಪಕರಾದ ವಿದ್ಯಾರಣ್ಯರು ಮಾತ್ರ ಇದಕ್ಕೆ ಭಾಷ್ಯ ಬರೆದಿದ್ದಾರೆ.

> ತತ್ತ್ವಸಾಕ್ಷಾತ್ಕಾರ ಚಿತ್ತಶುದ್ಧಿಯಿನಹುದು
> ಚಿತ್ತಶೋಧನೆ ಮತಿ ಚಮತ್ಕಾರವಲ್ಲ।
> ಬಿತ್ತರದ ಲೋಕಪರಿಪಾಕದಿಂ ಸತ್ಕರ್ಮ
> ಸಕ್ತಿಯಿಂ ಶುದ್ಧತೆಯೋ ಮಂಕುತಿಮ್ಮ ॥
>
> ಮೋಕ್ಷದಾಶೆಯೊಳು ಅತ್ಯಾತುರತೆಯೊಳಿತಲ್ಲ
> ಬಹುಕಾಲಶಿಕ್ಷೆಯಿಲ್ಲದೆ ಮೋಕ್ಷವಿಲ್ಲ।
> ಲಕ್ಷ್ಯತಪ್ಪದೆ ಚರಿಸು ಸಾಮಾನ್ಯಧರ್ಮಗಳ
> ಮೋಕ್ಷ ಸ್ವತಃಸಿದ್ಧ ಮಂಕುತಿಮ್ಮ ॥

ಮೊದಲನೆಯ ಶೀಕ್ಷಾವಲ್ಲಿಯು ವೇದಗಳ ಅಧ್ಯಾಪನಕ್ಕೂ ಉಪನಿಷತ್ತಿನ ಅಧ್ಯಾತ್ಮ ವಿಚಾರಕ್ಕೂ ಸೇತುವೆಯಂತಿದೆ. ಆರಂಭದಲ್ಲಿ ವೇದಾಧ್ಯಯನದಲ್ಲಿಯೇ ಮುಳುಗಿರುವ ಅಧಿಕಾರಿಯನ್ನು ಕೂಡಲೆ ಅಧ್ಯಾತ್ಮದ ಕಡೆಗೆ ಎಳೆದು ರುಚಿ ಬರಿಸಲು ಕಷ್ಟಸಾಧ್ಯವೆಂದು ತಿಳಿದು ಮೊದಮೊದಲಲ್ಲಿ ಅವನಿಗೆ ಇಷ್ಟವಾಗುವಂತೆ ಅಧ್ಯಯನ, ವಿಧಿ, ಅಲ್ಪ ಸ್ವಲ್ಪ ಕರ್ಮಗಳು – ಇವುಗಳಿಂದ ಆರಂಭಿಸಿ ಅವನನ್ನು ವ್ಯಾಹೃತಿ, ಪ್ರಣವೋಪಾಸನೆಗಳ ಕಡೆ ಎಳೆಯಲು ಪ್ರಯತ್ನಪಟ್ಟಿದ್ದಾರೆ. ಹಾಗೆಯೇ ಬಹಳ ಮುಖ್ಯವಾದ ಆಧ್ಯಾತ್ಮಿಕ ವಿಚಾರ ಮಾಡಲು ಬೇಕಾದ ಅಂತರಂಗ ಶುದ್ಧಿಗೆ ಸಾಧನವಾದ ಧರ್ಮಗಳನ್ನೂ ಉಪದೇಶಿಸಿದ್ದಾರೆ.

ಮಾನ್ಯ ಲೇಖಕರು ವೇದ, ವೇದಾಂಗಗಳಲ್ಲಿ ಮತ್ತು ಅವುಗಳ ಕರ್ಮ ವಿಧಾನಗಳಲ್ಲಿ ಅಪಾರ ಪರಿಣತಿ ಪಡೆದಿರುವ ಮಹನೀಯರು. ಲೋಹಶಾಸ್ತ್ರದ ಇಂಜಿನೀರ್ ಆಗಿ ನಿವೃತ್ತಿಹೊಂದಿರುವ ಇವರು ವೈದಿಕ ಜೀವನದ ಅನುಷ್ಠಾನದಲ್ಲಿ ನಿಷ್ಣಾತರು; ಉತ್ತಮ ಲೇಖಕರು ಮತ್ತು ಸಾಧಕರು.

ಎರಡು ಮತ್ತು ಮೂರನೇ ವಲ್ಲಿಗಳಲ್ಲಿ ಮುಖ್ಯವಾಗಿ ಪಂಚಕೋಶ ವಿವೇಕದಿಂದ ಬ್ರಹ್ಮಜ್ಞಾನವನ್ನು ಪಡೆಯುವ ಕ್ರಮವನ್ನೂ ಆನಂದಮೀಮಾಂಸೆಯನ್ನೂ, ಬ್ರಹ್ಮಜ್ಞಾನಿಯ ಸ್ವರೂಪವನ್ನೂ ಸ್ವಲ್ಪಮಟ್ಟಿಗೆ ತಿಳಿಸಿದ್ದಾರೆ.

ಆದರೆ ಈ ಕಾಲಕ್ಕೆ ಪ್ರಸ್ತುತವಾಗಿ ತೈತ್ತಿರೀಯೋಪನಿಷತ್ತಿನಿಂದ ಸಾಮಾನ್ಯರು ಕಲಿಯಬೇಕಾದ್ದು, ತಮ್ಮ ಆಧ್ಯಾತ್ಮಿಕ ಉನ್ನತಿಗೆ ಬೇಕಾದ ಸಾಧನೆಗಳನ್ನು. ಅವು ಸಿದ್ಧವಾದ ಮೇಲೇ ಅವರು ಆಧ್ಯಾತ್ಮಿಕ ಜ್ಞಾನಕ್ಕೆ ಅಧಿಕಾರಿಗಳಾಗಲು ಸಾಧ್ಯ. ಆದ್ದರಿಂದ ಆ ಸಾಧನಗಳೇ ತೈತ್ತಿರೀಯ ಉಪನಿಷತ್ತಿನ ಸಾರ ಎಂದು ಹೇಳಿದರೆ ತಪ್ಪಾಗಲಾರದು, ಅತಿಶಯೋಕ್ತಿಯೂ ಆಗಲಾರದು.

ಈ ಸಾಧನಗಳನ್ನು ಮೊದಲನೇ ವಲ್ಲಿಯ ಕೊನೆಯ ಅನುವಾಕದಲ್ಲಿ ಆಚಾರ್ಯನು ಶಿಷ್ಯನಿಗೆ ಮಾಡುವ ಉಪದೇಶರೂಪದಲ್ಲಿ ಕೊಟ್ಟಿದ್ದಾರೆ. **ಸತ್ಯಂವದ, ಧರ್ಮಂ ಚರ** (ಸತ್ಯವನ್ನು ಹೇಳು, ಧರ್ಮವನ್ನು ಆಚರಿಸು) ಎಂಬೆಲ್ಲಾ ಉಪದೇಶಗಳಿವೆ. ಇವೆಲ್ಲಕ್ಕೂ ಮುಕುಟಪ್ರಾಯವಾಗಿ ಮೂರೇ ವಾಕ್ಯಗಳಲ್ಲಿ ಉಪದೇಶಿಸುವ ಆಚಾರ್ಯರ ಮಾತು ಇವತ್ತಿನ ಧರ್ಮವಿಷಯದ ಅಜ್ಞಾನ, ಅವಿವೇಕವಿಜೃಂಭಿತ ಸಮಾಜಕ್ಕೆ ಅತ್ಯಂತ ಪ್ರಸ್ತುತವಾಗಿದೆ.

ಆಚಾರ್ಯರು ಶಿಷ್ಯನಿಗೆ ಉಪದೇಶಿಸುತ್ತಿದ್ದಾರೆ:

> ಯಾನ್ಯಸ್ಮಾಕಗ್ಂ ಸುಚರಿತಾನಿ । ತಾನಿ ತ್ವಯೋಪಾಸ್ಯಾನಿ ।
> ನೋ ಇತರಾಣಿ ।

(ಶಿಷ್ಯ! ನಮ್ಮಲ್ಲಿ ಏನು ಸುಚರಿತ್ರಗಳಿವೆಯೋ ಅವುಗಳನ್ನೇ ನೀನು ಅನುಸರಿಸು. ಸುಚರಿತ್ರಕ್ಕೆ ವಿರುದ್ಧವಾದದ್ದನ್ನು ಆಚರಿಸಬೇಡ.)

ಇದು ಆ ವಾಕ್ಯಗಳ ಸಾಮಾನ್ಯ ಅರ್ಥ. ಆದರೆ ಇದಕ್ಕೆ ವಿದ್ಯಾರಣ್ಯರು ಬರೆದಿರುವ ಭಾಷ್ಯ ಎಲ್ಲರ ಕಣ್ಣುಗಳನ್ನೂ ತೆರೆಯಿಸುತ್ತದೆ. ಆ ಭಾಷ್ಯದಲ್ಲಿ ಬರುವ ವಿವರಣೆ ಹೀಗಿದೆ:

ಮನುಷ್ಯನ ಚರಿತಗಳು(ನಡವಳಿಕೆ) ಎರಡು ವಿಧ – ದೈವ ಮತ್ತು ಆಸುರ. ಇವೆರಡನ್ನೂ ಭಗವಾನ್ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ

ವಿವರಿಸಿದ್ದಾನೆ. ಉಪನಿಷತ್ತಿನ ಆಚಾರ್ಯರ ಆಶಯ ಇದು: ಇಲ್ಲಿ ನಮಗೆ ಸಂಬಂಧಪಟ್ಟಂತೆ ಯಾವ ಅಭಯ ಮುಂತಾದ ಒಳ್ಳೆಯ ಗುಣಗಳು ಇವೆಯೋ ಅವನ್ನು ಮಾತ್ರ ನೀನು ಅನುಸರಿಸಬೇಕು. ದಂಭ ಮುಂತಾದ ಆಸುರೀ ಗುಣಗಳನ್ನಲ್ಲ. ಈ ನ್ಯಾಯವನ್ನೇ ನಾವು ಎಲ್ಲಾ ಶಿಷ್ಟಾಚಾರಗಳಲ್ಲಿಯೂ ಅನ್ವಯಿಸಿಕೊಳ್ಳಬೇಕು. ತಂದೆಯಾದ ಜಮದಗ್ನಿಯ ಆಜ್ಞೆಯಂತೆ ತಾಯಿಯನ್ನು ಪರಶುರಾಮನು ಕೊಂದ ಎನ್ನುವಲ್ಲಿ ತಂದೆಯ ಆಜ್ಞಾಪರಿಪಾಲನವೆಂಬ ದೈವೀಚರಿತವನ್ನು ಮಾತ್ರವೇ ಆದರಿಸಬೇಕು. ಮಾತೃವಧಾರೂಪವಾದ ದುಶ್ಚರಿತವನ್ನಲ್ಲ. ಹೀಗೆ ಬೇರೆ ಬೇರೆ ಉದಾಹರಣೆಗಳನ್ನು ತೆಗೆದುಕೊಳ್ಳಬಹುದು.

ಈ ಉಪದೇಶವು ಅಂಧ ಸಂಪ್ರದಾಯಗಳಲ್ಲಿ ಮುಳುಗಿರುವ ಇವತ್ತಿನ ಸಮಾಜಕ್ಕೆ ತಾರಕಮಂತ್ರವಾಗಬೇಕೆಂದು ಹೇಳಿದರೆ ಧಾರ್ಷ್ಟ್ಯವಾಗಲಾರದು. ಇವತ್ತು ಈ ಬರಡು ಆಚರಣೆಗಳ ಕುರುಡು ಅನುಕರಣೆಯಿಂದ ಅಧರ್ಮವೇ ಧರ್ಮವೆನ್ನಿಸಿಕೊಳ್ಳುವ ಸ್ಥಿತಿ ಬಂದಿದೆಯೆಂದರೆ ತಪ್ಪಾಗಲಾರದು. ವಿದ್ಯಾರಣ್ಯರ **ಅಯಮೇವ ನ್ಯಾಯಃ ಸರ್ವತ್ರ ಶಿಷ್ಟಾಚಾರೇ ಯೋಜನೀಯಃ** (ಇದೇ ನ್ಯಾಯವೇ ಎಲ್ಲಾ ಶಿಷ್ಟಾಚಾರಗಳಿಗೂ ಅನ್ವಯವಾಗುತ್ತದೆ) ಎಂಬ ಘೋಷಣೆಯು ಧರ್ಮಾಚರಣೆಗೆ ಮುಕುಟಪ್ರಾಯವಾಗಿದೆ. ವೈಚಾರಿಕ ಬುದ್ಧಿಯೇ ಇಲ್ಲದೆ ಅರ್ಥವಿಲ್ಲದ ಗೊಡ್ಡು ಸಂಪ್ರದಾಯಗಳನ್ನೇ ಪರಮಧರ್ಮವೆಂದು ತಿಳಿದುಕೊಂಡಿರುವ ನಮ್ಮ ಸಮಾಜವನ್ನು ಹೊಡೆದೆಬ್ಬಿಸುವಂತಿದೆ.

ಹೀಗೆ ಆಚಾರ್ಯನು ಉಪದೇಶವನ್ನು ಮುಂದುವರಿಸುತ್ತಾ ಬಹು ಮುಖ್ಯವಾದ ಇನ್ನೊಂದು ಉಪದೇಶವನ್ನು ಬೋಧಿಸುತ್ತಿದ್ದಾನೆ. (*ಶೀಕ್ಷಾವಲ್ಲಿ, ೧೧ ನೇ ಅನುವಾಕ* ) :

**ಅಥ ಯದಿ ತೇ ಕರ್ಮವಿಚಿಕಿತ್ಸಾ ವಾ ವೃತ್ತ ವಿಚಿಕಿತ್ಸಾ ವಾ ಸ್ಯಾತ್ । ಯೇ ತತ್ರ ಬ್ರಾಹ್ಮಣಾಃ ಸಂಮರ್ಶಿನಃ । ಯುಕ್ತಾ ಆಯುಕ್ತಾಃ । ಅಲೂಕ್ಷಾ ಧರ್ಮಕಾಮಾಃ ಸ್ಯುಃ ।**

"ನಿನಗೆ ಕರ್ಮ ಮಾಡುವುದರಲ್ಲಾಗಲಿ ಅಥವಾ ನಡವಳಿಕೆಯಲ್ಲಾಗಲಿ ಸಂದೇಹ ಬಂದರೆ ಅಲ್ಲಿರುವ ತಿಳಿದ ಹಿರಿಯರನ್ನೇ ನೋಡು. ಎಂಥಾ ಹಿರಿಯರು? ರಾಗ, ದ್ವೇಷ, ಅಸೂಯಾದಿಗಳಿಲ್ಲದೆ ವಿಷಯವನ್ನು ಚೆನ್ನಾಗಿ ವಿಮರ್ಶೆ ಮಾಡುವವರು, ಎಲ್ಲವನ್ನೂ ಸ್ವತಃ ಅನುಷ್ಠಾನದಲ್ಲಿಟ್ಟುಕೊಂಡಿರುವವರು, ಇತರರಲ್ಲಿರುವ ಒಳ್ಳೆಯದನ್ನೂ ಜಾರಿಗೆ ತಂದಿರುವವರು, ಧರ್ಮದ ವಿಷಯದಲ್ಲಿ ಅಗ್ರಹರಹಿತರಾಗಿರುವವರು, ಸದಾ ಧರ್ಮವನ್ನೇ ಕಾಪಾಡಬೇಕೆಂಬ ಕಾಮನೆಯುಳ್ಳವರು."

**ಯಥಾ ತೇ ತತ್ರ ವರ್ತೇರನ್। ತಥಾ ತತ್ರ ವರ್ತೇಥಾಃ। ಅಥಾಭ್ಯಾಖ್ಯಾತೇಷು । ಯೇ ತತ್ರ ಬ್ರಾಹ್ಮಣಾಃ ಸಂಮರ್ಶಿನಃ । ಯುಕ್ತಾ ಆಯುಕ್ತಾಃ । ಅಲೂಕ್ಷಾ ಧರ್ಮ ಕಾಮಾ ಸ್ಯುಃ । ಯಥಾ ತೇ ತೇಷು ವರ್ತೇರನ್। ತಥಾ ತೇಷು ವರ್ತೇಥಾಃ ॥**

"ನಿನಗೆ ಸಂದೇಹ ಬಂದಿರುವ ವಿಷಯದಲ್ಲಿ, ಹಿರಿಯರಾದ ಬ್ರಾಹ್ಮಣರು ಯಾವ ರೀತಿ ನಡೆದುಕೊಳ್ಳುತ್ತಾರೆಯೋ ಅದೇ ರೀತಿ ನೀನೂ ಅನುಸರಿಸು. ಸಹವಾಸಕ್ಕೆ ಯೋಗ್ಯರಲ್ಲದವರ ವಿಷಯದಲ್ಲಿಯೂ ಇದೇ ರೀತಿ ಹಿರಿಯರನ್ನು ನೋಡಿ, ಅವರಂತೆ ನೀನು ನಡೆಯಬೇಕು."

ಈ ಉಪದೇಶ ಇವತ್ತಿನ ನಮ್ಮ ಸಂಶಯಗ್ರಸ್ತ ಸಮಾಜಕ್ಕೆ ಬಹಳ ಪ್ರಸ್ತುತವಾಗಿದೆ. ನಮಗೆ ಎಲ್ಲದರಲ್ಲಿಯೂ ಸಂದೇಹ. ಅದರಲ್ಲಿಯೂ ಧಾರ್ಮಿಕ ವಿಧಿವಿಧಾನಗಳಲ್ಲಿ, ಅವುಗಳನ್ನು ನಿರ್ಣಯಿಸಲು ಈಗ ನಾವು ಅನುಸರಿಸುತ್ತಿರುವಂತೆ ನಮ್ಮ ಹಿರಿಯರನ್ನು ಅನುಕರಣ ಮಾಡುವುದು, ಸರಿಯಾದ ಮಾರ್ಗವೇ ಆಗಿದೆ. ಆದರೆ ಹಿರಿಯರು ಎಂಥವರಾಗಿರಬೇಕು ಎಂಬುದನ್ನು ಉಪನಿಷತ್ಕಾರರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ವಯಸ್ಸಿನಿಂದ ಹಿರಿಯರಾದರೆ ಸಾಲದು. ಅವರಿಗೆ ಉಪನಿಷತ್ತಿನಲ್ಲಿ ಹೇಳಿರುವಂತೆ **ಸಮದರ್ಶಿತ್ವ, ಯುಕ್ತಾಯುಕ್ತ ವಿವೇಚನೆ, ಧರ್ಮದ ವಿಷಯದಲ್ಲಿ ಆಗ್ರಹ ಇಲ್ಲದಿರುವುದು** ಮುಂತಾದ ಉದಾತ್ತ ಗುಣಗಳು ಇರಬೇಕು. ಅಂಥವರ ನಡತೆಯೇ ನಮಗೆ ದಾರಿದೀಪವಾಗಬೇಕು. ಕಡೆಗೆ ಹೀಗೆ ಹೇಳಿ ಮುನಿಗಳು ಉಪನಿಷತ್ತನ್ನು ಮುಗಿಸುತ್ತಾರೆ.

**ಏಷ ಆದೇಶಃ। ಏಷ ಉಪದೇಶಃ। ಏಷಾ ವೇದೋಪನಿಷತ್। ಏತದನುಶಾಸನಮ್। ಏವಮುಪಾಸಿತವ್ಯಮ್। ಏವಮುಚೈತದುಪಾಸ್ಯಮ್॥**

"ಇದೇ ಆಜ್ಞೆ, ಇದೇ ನಿನಗೆ ಉಪದೇಶ. ಇದೇ ವೇದೋಪನಿಷತ್ತುಗಳ ಸಾರ. ಇದನ್ನು ಅವಶ್ಯವಾಗಿ ಅನುಸರಿಸಿಕೊಂಡು ಹೋಗು."

ನಿಜ. ಉಪನಿಷತ್ತುಗಳ ಮುಖ್ಯ ಉದ್ದೇಶ ಮನುಷ್ಯನ ಪರಮಪುರುಷಾರ್ಥವಾದ ಮೋಕ್ಷಸ್ವರೂಪವನ್ನು, ಅರ್ಥವಾಗುವಂತೆ ಹೇಳುವುದು. ಎಲ್ಲಾ ಉಪನಿಷತ್ತುಗಳ ಸಾರವೇ ಅದು. ಆದರೂ ಇವತ್ತಿನ ಸಮಾಜದಲ್ಲಿ ಮೋಕ್ಷಸ್ವರೂಪವನ್ನು ತಿಳಿದುಕೊಂಡು ಅದನ್ನೇ ಅನ್ವೇಷಣ ಮಾಡುವವರ ಸಂಖ್ಯೆ ಬಹಳ ಕಮ್ಮಿ. ಅದೂ ಅಲ್ಲದೆ ಮೋಕ್ಷಾನ್ವೇಷಣವು ಎಲ್ಲರಿಗೂ ಸುಲಭವಲ್ಲ. ಅದಕ್ಕೆ ವಿಶಿಷ್ಟ ಸಾಧನಗಳ ಆವಶ್ಯಕತೆ ಇದೆ.

ಮೋಕ್ಷವು ಎಷ್ಟು ಪ್ರಧಾನವೋ ಅದನ್ನು ಹೊಂದುವ ಸಾಧನಗಳೂ ಅಷ್ಟೇ ಪ್ರಧಾನ. ಸಾಧನಗಳಿಲ್ಲದೆ ಮೋಕ್ಷಕ್ಕೆ ಪ್ರಯತ್ನಪಡುವುದು ಏಣಿ ಮುಂತಾದ ಸಾಧನಗಳೇ ಇಲ್ಲದೆ ಮೇಲಕ್ಕೆ ಹತ್ತಲು ಪ್ರಯತ್ನಪಡುವಂತಾಗುತ್ತದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಉಪದೇಶದ ಕೊನೆಯಲ್ಲಿ **ಏಷಾ ವೇದೋಪನಿಷತ್** ಎಂದು ಕೊನೆಗೊಳಿಸಿದ್ದಾರೆ, ಇದೇ ವೇದೋಪನಿಷತ್ತುಗಳ ಸಾರ. ಇಲ್ಲಿ ಹೇಳಿರುವ ಉಪದೇಶಗಳು ಸಾರ್ವಕಾಲಿಕ, ಸಾರ್ವಭೌಮಿಕ, ಸಾರ್ವಜಾತಿಕ ಧರ್ಮಗಳು. ಇವು ಮೋಕ್ಷಕ್ಕೆ ಸಾಧನಗಳೇ ಅಲ್ಲದೆ ಪ್ರತಿಯೊಬ್ಬನನ್ನೂ ಉತ್ತಮ ಮನುಷ್ಯನನ್ನಾಗಿ ಮಾಡುವುವು.